# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| 1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | 810 |
| 2. ವಿಧಾನ ಪರಿಷತ್ತಿನ ಸದಸ್ಯರ ಹೆಸರು: | ಶ್ರೀ. ರಮೇಶ್ ಬಾಬು (ನಾಮನಿರ್ದೇಶಿತರು) |
| 3. ಉತ್ತರಿಸಬೇಕಾದ ದಿನಾಂಕ: | 15.12.2025 |
| 4. ಉತ್ತರಿಸುವ ಸಚಿವರು: | ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಗೃಹ ಉಪಯೋಗಿ ವಸ್ತುಗಳ ಮಾರಾಟಗಾರರು ಅರ್ಧ ಬೆಲೆ ಮಾರಾಟ, ಬಹುಮಾನ, ರಿಯಾಯಿತಿ ಇತರೆ ಹೆಸರಿನಲ್ಲಿ ಜಾಹೀರಾತು ನೀಡಿ ಗ್ರಾಹಕರಿಗೆ ಮೋಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?</td><td>ಈ ರೀತಿ ಯಾವುದೇ ದೂರು ಸರ್ಕಾರದಲ್ಲಿ ಸ್ವೀಕರಿಸಿರುವುದಿಲ್ಲ.<br><br>ಗ್ರಾಹಕರು ಯಾವುದೇ ವಸ್ತುವನ್ನು ಖರೀದಿಸುವ ಅಥವಾ ಯಾವುದೇ ಸೇವೆಯನ್ನು ಪಡೆಯುವಾಗ ವಂಚನೆಗೆ ಒಳಗಾದಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆ 2019ರಡಿ ಪ್ರಕರಣವನ್ನು ದಾಖಲಿಸಿ ಪರಿಹಾರವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ.</td></tr>
<tr><td>(ಆ)</td><td>ಗ್ರಾಹಕರಿಗೆ ಮೋಸ ಮಾಡಿ ಮಾರಾಟ ಮಾಡುತ್ತಿರುವ ಕಂಪನಿಗಳ ವಿರುದ್ಧ ಇಲ್ಲಿಯವರೆಗೆ ಬೆಂಗಳೂರು ವ್ಯಾಪ್ತಿಯಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿರುತ್ತದೆ; ಪೂರ್ಣ ವಿವರಗಳನ್ನು ಒದಗಿಸುವುದು;</td><td>ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ ಹಾಗೂ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಗಳಲ್ಲಿ ಗೃಹೋಪಯೋಗಿ ವಸ್ತುಗಳಿಗೆ ಸಂಬಂಧಿಸಿದಂತೆ ದಿನಾಂಕ:31.10.2025ರ ಅಂತ್ಯಕ್ಕೆ ದಾಖಲಾಗಿರುವ, ಇತ್ಯರ್ಥವಾಗಿರುವ ಹಾಗೂ ಬಾಕಿ ಇರುವ ಪ್ರಕರಣಗಳ ವಿವರವನ್ನು ಈ ಕೆಳಕಂಡಂತೆ ಒದಗಿಸಲಾಗಿದೆ.<br><br>
<table>
<tr><th colspan="5">ದಿನಾಂಕ:31.10.2025ರವರೆಗೆನ ಪ್ರಕರಣಗಳ ವಿವರಗಳು.</th></tr>
<tr><th>ಕ್ರ.ಸಂ</th><th>ರಾಜ್ಯ/ಜಿಲ್ಲಾ ಆಯೋಗ</th><th>ದಾಖಲಾಗಿರುವ ಪ್ರಕರಣಗಳು</th><th>ಇತ್ಯರ್ಥವಾಗಿರುವ ಪ್ರಕರಣಗಳು</th><th>ಬಾಕಿ ಇರುವ ಪ್ರಕರಣಗಳು</th></tr>
<tr><td>1.</td><td>ರಾಜ್ಯ ಆಯೋಗ (ದೂರುಗಳು)</td><td>04</td><td>02</td><td>02</td></tr>
<tr><td>2.</td><td>ಬೆಂಗಳೂರು ನಗರ ಜಿಲ್ಲಾ ಆಯೋಗ</td><td>502</td><td>475</td><td>27</td></tr>
<tr><td>3.</td><td>ಬೆಂಗಳೂರು ಗ್ರಾಮಾಂತರ</td><td>25</td><td>21</td><td>04</td></tr>
<tr><td>4.</td><td>ಬೆಂಗಳೂರು ನಗರ 1ನೇ ಅಪರ ಜಿಲ್ಲಾ ಆಯೋಗ</td><td>606</td><td>593</td><td>13</td></tr>
<tr><td>5.</td><td>ಬೆಂಗಳೂರು ನಗರ 2ನೇ ಅಪರ ಜಿಲ್ಲಾ ಆಯೋಗ</td><td>510</td><td>507</td><td>03</td></tr>
<tr><td>6.</td><td>ಬೆಂಗಳೂರು ನಗರ 3ನೇ ಅಪರ ಜಿಲ್ಲಾ ಆಯೋಗ</td><td>341</td><td>335</td><td>06</td></tr>
<tr><td>7.</td><td>ಬೆಂಗಳೂರು ನಗರ 4ನೇ ಅಪರ ಜಿಲ್ಲಾ ಆಯೋಗ</td><td>346</td><td>317</td><td>29</td></tr>
<tr><td colspan="2">ಒಟ್ಟು</td><td>2334</td><td>2250</td><td>84</td></tr>
</table>
</td></tr>
<tr><td>(ಇ)</td><td>ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಎಷ್ಟು ಹೋಟೆಲ್ ಉದ್ಯಮಗಳು ನಡೆಯುತ್ತಿವೆ; ಇವುಗಳಲ್ಲಿ ನೋಂದಾವಣೆಯಾಗಿ ಲೈಸನ್ಸ್ ಪಡೆದಿರುವ ಹೋಟೆಲ್‌ಗಳು ಎಷ್ಟು; ನೋಂದಾವಣೆ ಇಲ್ಲದೇ</td><td>ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಹೋಟೆಲ್ ಉದ್ಯಮಗಳ ವಿವರ ಬೆಂಗಳೂರು ನಗರ ಪಾಲಿಕೆವಾರು ಈ ಕೆಳಕಂಡಂತಿದೆ:<br><br>
<table>
<tr><th>ಪಾಲಿಕೆಗಳ ಹೆಸರು</th><th>ಹೋಟೆಲ್ ಉದ್ಯಮಗಳು</th><th>ನೋಂದಾವಣೆಯಾಗಿ ಲೈಸನ್ಸ್ ಪಡೆದಿರುವ ಹೋಟಲ್‌ಗಳು</th><th>ನೋಂದಾವಣೆ ಇಲ್ಲದೆ ನಡೆಯುತ್ತಿರುವ ಹೋಟಲ್‌ಗಳು</th></tr>
<tr><td>ಬೆಂಗಳೂರು</td><td>661</td><td>631</td><td>30</td></tr>
</table>
</td></tr>
</table>

ನಡೆಯುತ್ತಿರುವ ಹೋಟೆಲ್‌ಗಳು ಎಷ್ಟು; ಪೂರ್ಣ ವಿವರ ಒದಗಿಸುವುದು;

| | | | |
|---|---|---|---|
| ಕೇಂದ್ರ ನಗರ ಪಾಲಿಕೆ | | | |
| ಬೆಂಗಳೂರು ಉತ್ತರ ನಗರ ಪಾಲಿಕೆ | 728 | 719 | 9 |
| ಬೆಂಗಳೂರು ಪೂರ್ವ ನಗರ ಪಾಲಿಕೆ | 195 | 195 | 0 |
| ಬೆಂಗಳೂರು ದಕ್ಷಿಣ ನಗರ ಪಾಲಿಕೆ | 525 | 483 | 42 |
| ಬೆಂಗಳೂರು ಪಶ್ಚಿಮ ನಗರ ಪಾಲಿಕೆ | 1002 | 955 | 47 |
| ಒಟ್ಟು | 3111 | 2983 | 128 |

ಈ) ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಇರುವ ತ್ರೀ ಸ್ಟಾರ್ ಹೋಟೆಲ್, ಫೈವ್ ಸ್ಟಾರ್ ಹೋಟೆಲ್ ಮತ್ತು ಸೆವೆನ್ ಸ್ಟಾರ್ ಹೋಟೆಲ್‌ಗಳ ಸಂಖ್ಯೆ ಎಷ್ಟು; ಅವುಗಳಿಗೆ ಅನುಮತಿ ನೀಡಲಾಗಿದೆಯೇ; ಅನಧಿಕೃತ ಸ್ಟಾರ್ ಹೋಟೆಲ್‌ಗಳ ಸಂಖ್ಯೆ ಎಷ್ಟು; (ಪೂರ್ಣ ವಿವರಗಳನ್ನು ಒದಗಿಸು ವುದು).

ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ತ್ರೀ ಸ್ಟಾರ್ ಹೋಟೆಲ್, ಫೈವ್ ಸ್ಟಾರ್ ಹೋಟೆಲ್ ಮತ್ತು ಸೆವೆನ್ ಸ್ಟಾರ್ ಹೋಟೆಲ್‌ಗಳ ಸಂಖ್ಯೆಯ ವಿವರ ಬೆಂಗಳೂರು ನಗರ ಪಾಲಿಕೆವಾರು ಈ ಕೆಳಕಂಡಂತಿದೆ:

| ಪಾಲಿಕೆಗಳ ಹೆಸರು | ತ್ರೀ ಸ್ಟಾರ್ ಹೋಟೆಲ್ | ಫೈವ್ ಸ್ಟಾರ್ ಹೋಟೆಲ್ | ಸೆವೆನ್ ಸ್ಟಾರ್ ಹೋಟೆಲ್ | ಅನಧಿಕೃತ ಸ್ಟಾರ್ ಹೋಟೆಲ್‌ಗಳ ಸಂಖ್ಯೆ |
|---|---|---|---|---|
| ಬೆಂಗಳೂರು ಕೇಂದ್ರ ನಗರ ಪಾಲಿಕೆ | 16 | 17 | 0 | 0 |
| ಬೆಂಗಳೂರು ಉತ್ತರ ನಗರ ಪಾಲಿಕೆ | 4 | 4 | 0 | 0 |
| ಬೆಂಗಳೂರು ಪೂರ್ವ ನಗರ ಪಾಲಿಕೆ | 14 | 1 | 0 | 0 |
| ಬೆಂಗಳೂರು ದಕ್ಷಿಣ ನಗರ ಪಾಲಿಕೆ | 5 | 0 | 0 | 0 |
| ಬೆಂಗಳೂರು ಪಶ್ಚಿಮ ನಗರ ಪಾಲಿಕೆ | 5 | 2 | 0 | 0 |
| ಒಟ್ಟು | 44 | 24 | 0 | 0 |

| | | |
|---|---|---|
| | | |
| ಉ) | ಹೋಟೆಲ್‌ಗಳಲ್ಲಿ ನೀಡುವ ತಿಂಡಿ ತಿನಿಸುಗಳ ದರಪಟ್ಟಿ ಸಾರ್ವಜನಿಕವಾಗಿ ಪ್ರಕಟಿಸಲು ಇರುವ ನಿಯಮಗಳೇನು; ಇದನ್ನು ಪಾಲಿಸಲಾಗುತ್ತಿದೆಯೇ: ಇಲ್ಲದೇ ಇದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಹೋಟೆಲ್‌ಗಳಲ್ಲಿ ನೀಡುವ ತಿಂಡಿ ತಿನಿಸುಗಳ ದರಪಟ್ಟಿ ಸಾರ್ವಜನಿಕವಾಗಿ ಪ್ರಕಟಿಸುವ ಸಂಬಂಧ ಯಾವುದೇ ನಿರ್ದಿಷ್ಟ ನಿಯಮವನ್ನು ಸರ್ಕಾರದಿಂದ ರೂಪಿಸಿರುವುದಿಲ್ಲ.<br><br>ಹೋಟೆಲ್‌ಗಳಲ್ಲಿನ ಪ್ಯಾಕೇಜ್ ತಿಂಡಿ ತಿನಿಸುಗಳ/ವಾಟರ್ ಬಾಟಲ್‌ಗಳ ಮೇಲಿನ ಘೋಷಣೆಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಪೊಟ್ಟಣ ಸಾಮಾಗ್ರಿ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಹೋಟೆಲ್‌ಗಳನ್ನು ಕಾನೂನು ಮಾಪನಶಾಸ್ತ್ರ (ಪೊಟ್ಟಣ ಸಾಮಾಗ್ರಿ) ನಿಯಮ-2011ರಡಿ ತಪಾಸಣೆ ನಡೆಸಿ ನಿಯಮಾನುಸಾರ ಅಭಿಸಂಧಾನ ಶುಲ್ಕವನ್ನು ವಿಧಿಸಲಾಗುವುದು ಹಾಗೂ ಅಭಿಸಂಧಾನಕ್ಕೆ ಸಹಮತಿಸದ ಹೋಟೆಲ್ ಗಳ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಲಾಗುತ್ತದೆ. |

**ಸಂಖ್ಯೆ: ಇ-ಆನಾಪ 153 ಸಲಫ 2025**

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳು ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖೆ.